# ಶ್ರೀಮಾತೆಯವರೊಂದಿಗೆ ಮಾತುಕತೆ

ಬಂಗಾಳಿ ಮೂಲ: **ಸರಳಬಾಲಾ ಸರ್ಕಾರ್**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ರಾಮಕೃಷ್ಣ ಭಾವಧಾರೆಯ ಆರಂಭಿಕ ದಿನಗಳಲ್ಲಿ ಇದ್ದ ಭಕ್ತರುಗಳ ನಡುವೆ ಸರಳಬಾಲಾ ಸರ್ಕಾರ್ ಅವರ ಹೆಸರು ಉಲ್ಲೇಖನೀಯ. ೮೬ ವರ್ಷಗಳಷ್ಟು ದೀರ್ಘಕಾಲದ ಅವರ ಜೀವನದಲ್ಲಿ (೧೮೭೫-೧೯೬೧) ಅವರು ಬಂಗಾಳಿ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಆಗಿನ ಸ್ವದೇಶೀ ಚಳವಳಿಯಲ್ಲೂ ಅವರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. 'ಅಮೃತಬಜಾರ್ ಪತ್ರಿಕಾ', 'ಆನಂದಬಜಾರ್ ಪತ್ರಿಕಾ' ಮುಂತಾದ ಪ್ರಸಿದ್ಧ ಬಂಗಾಳಿ ವೃತ್ತಪತ್ರಿಕೆಗಳನ್ನು ಮುನ್ನಡೆಸಿದ ಕುಟುಂಬಕ್ಕೆ ಸೇರಿದವರಾಗಿದ್ದರು ಅವರು. ಅವರು ರಚಿಸಿದ 'ನಾ ಕಂಡಂತೆ ನಿವೇದಿತಾ', 'ಸ್ವಾಮಿ ವಿವೇಕಾನಂದರು ಮತ್ತು ರಾಮಕೃಷ್ಣ ಮಹಾಸಂಘ' ಎಂಬ ಎರಡು ಗ್ರಂಥಗಳು ರಾಮಕೃಷ್ಣ-ವಿವೇಕಾನಂದ ಸಾಹಿತ್ಯಕ್ಕೆ ಅವರು ನೀಡಿದ ಅಮೂಲ್ಯ ಕೊಡುಗೆ. ಕಲ್ಕತ್ತಾ ವಿಶ್ವವಿದ್ಯಾನಿಲಯವು ೧೯೫೩ರಲ್ಲಿ ನಡೆಸಿದ 'ಗಿರೀಶಚಂದ್ರ ಘೋಷ್ ಪ್ರವಚನ ಮಾಲೆ'ಯಲ್ಲಿ ಭಾಗವಹಿಸಿದ ಮೊದಲ ಮಹಿಳೆ ಸರಳಬಾಲಾ ಸರ್ಕಾರ್. ೧೯೦೯ರಲ್ಲಿ 'ಉದ್ಬೋಧನ'ದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ ಮನೆಗೆ ಶ್ರೀಮಾತೆಯವರು ಬಂದ ದಿವಸವೇ ಅವರು ಸೋದರಿ ನಿವೇದಿತಾಳ ಆಹ್ವಾನದ ಮೇರೆಗೆ ಅವಳ ಶಾಲೆಗೆ ಭೇಟಿಯಿತ್ತರು; ಅಂದು ಸರಳಬಾಲಾ ತಾನು ರಚಿಸಿದ ಕವಿತೆಗಳ ಆವೃತ್ತಿಯನ್ನು ಶ್ರೀಮಾತೆಯವರಿಗೆ ಸಮರ್ಪಿಸಿದರು. ಸರಳಬಾಲಾ ಜೀವನದಲ್ಲಿ ಶ್ರೀಮಾತೆ ಹಾಗೂ ನಿವೇದಿತಾ- ಇಬ್ಬರ ಪ್ರಭಾವ ಗಾಢವಾಗಿತ್ತು. ಶ್ರೀಮಾತೆಯವರ ಜೊತೆಗೆ ಅವರ ಶಿಷ್ಯಂದಿರು ಹಾಗೂ ಭಕ್ತರು ನಡೆಸಿದ ಮಾತುಕತೆಗಳ ಸಂಕಲನ ಗ್ರಂಥ 'ಶ್ರೀ ಶ್ರೀ ಮಾಯಾರೇ ಕಥಾ' (ಕನ್ನಡದಲ್ಲಿ: ಶ್ರೀ ಶಾರದಾದೇವಿ ವಚನವೇದ') ಗ್ರಂಥದ ಆರಂಭದಲ್ಲಿ 'ಪರಿಚಯ' ಎಂಬ ಮುನ್ನುಡಿಯನ್ನು ಸರಳಬಾಲಾ ಬರೆದಳು. ಈ 'ಪರಿಚಯ'ದ ಕೆಲವು ಭಾಗಗಳನ್ನು ಹಾಗೂ ಇನ್ನಿತರ ಕೆಲವು ಭಾಗಗಳನ್ನು ಒಟ್ಟುಸೇರಿಸಿ ಈ ಲೇಖನವನ್ನು ರೂಪಿಸಲಾಗಿದೆ. *(-ಸಂ)*

ಶ್ರೀಮಾತೆಯವರ ಅನೇಕ ಮಂದಿ ಹೆಣ್ಣುಮಕ್ಕಳು ಭಾವಿಸುತ್ತಿದ್ದರು, ಶ್ರೀಮಾತೆ ತನ್ನನ್ನು ಅತಿಶಯವಾಗಿ ಪ್ರೀತಿಸುತ್ತಾರೆ, ಎಂದಿಗೂ ನನ್ನನ್ನು ಮರೆಯಲಾರರು ಎಂಬುದಾಗಿ. ಈ ದೀನ, ಅಯೋಗ್ಯ ಲೇಖಕಿ ಕೂಡಾ ಅಂತಹವರ ನಡುವೆ ಒಬ್ಬಳು. ಶ್ರೀಮಾತೆಯವರು ಅತ್ಯಂತ ಸನಿಹದಲ್ಲೇ ಇರುತ್ತಿದ್ದರು; ಅವರ ದರ್ಶನ ಪಡೆಯಲು ಪ್ರಬಲವಾದ ಇಚ್ಛೆಯೇನೂ ಇಲ್ಲ ಎಂದು ಹೇಳಲಾಗದು. ಆದರೆ ಸಂಕೋಚದಿಂದಾಗಿ ಯಾವಾಗಲೂ ಹಾಗೆ ಮಾಡಲಾಗುತ್ತಿರಲಿಲ್ಲ. ಹೀಗಿದ್ದರೂ, ಎಷ್ಟೋ ದಿನಗಳ ನಂತರ ಶ್ರೀಮಾತೆಯವರ ದರ್ಶನ ಭಾಗ್ಯ ಲಭಿಸಿದಾಗ ನನ್ನ ಮನಸ್ಸು, ಪ್ರಾಣಗಳಲ್ಲಿ ಹೀಗನ್ನಿಸುತ್ತಿತ್ತು- ಶ್ರೀಮಾತೆ ಒಂದು ಸಲವಾದರೂ ನನ್ನನ್ನು ಮರೆತಿಲ್ಲ- ಎಂದು.

ಅವರ ಪ್ರೀತಿ ಎಂತಹುದೆಂದರೆ, ಅದು ಅವರನ್ನು ಕುರಿತು ಹೊತ್ತುಹೊತ್ತಿಗೂ ಹೊಸ ಹೊಸ ಭಾವನೆಗಳನ್ನು ಹುಟ್ಟಿಸುವಂತಿತ್ತು. ಒಂದು ವ್ಯಕ್ತಿಯ ಒಬ್ಬನೇ ಮಗ ಸಂನ್ಯಾಸಿಯಾಗಿದ್ದ; ಆ ವ್ಯಕ್ತಿ ಶ್ರೀಮಾತೆಯವರ ಬಳಿಗೆ ಬಂದು ತಮ್ಮ ಮನಸ್ಸಿನ ಸಂಕಟವನ್ನು ಹೇಳಿಕೊಂಡು ಕಣ್ಣೀರು ಸುರಿಸತೊಡಗಿದರು. ಶ್ರೀಮಾತೆಯವರ ಕಣ್ಣುಗಳಲ್ಲೂ ನೀರಿಳಿಯತೊಡಗಿತು. ಶ್ರೀಮಾತೆಯವರು ಹೇಳಿದರು: ''ಅಯ್ಯೋ! ಹೌದಲ್ಲ, ಒಬ್ಬನೇ ಮಗ; ಪ್ರಾಣದ ಪ್ರಾಣ ಅವನು. ಈ ರೀತಿ ಸಂನ್ಯಾಸಿಯಾಗಿಬಿಟ್ಟರೆ, ತಾಯಿಯಾದವಳು ಹೇಗೆ ಪ್ರಾಣವನ್ನು ಹಿಡಿದಿಡಬೇಕು?'' ಇನ್ನೊಂದು ದಿನ, ಒಬ್ಬರ ಮಕ್ಕಳಿಬ್ಬರೂ ಸಂನ್ಯಾಸಿಯಾಗಬೇಕೆಂದು ಬ್ರಹ್ಮಚರ್ಯ ವ್ರತ ಸ್ವೀಕರಿಸಿದ್ದರು. ಇದನ್ನು ಶ್ರೀಮಾತೆಯವರಿಗೆ ತಿಳಿಸಿದಾಗ ಅವರೆಂದರು: ''ಅಮ್ಮಾ, ಮಕ್ಕಳಿಗೆ ಒಳ್ಳೆಯದಾಗಲಿ ಎಂಬುದೇ ತಾಯಿಯಾದವಳ ಆಸೆ. ಸಂಸಾರದಲ್ಲಿ ಏನಿದೆ? ಮಗನು ಪರಮ ಮಂಗಳಕರವಾದ ಮಾರ್ಗದಲ್ಲಿ ನಡೆದರೆ, ಅದಕ್ಕಿಂತ ಆನಂದದಾಯಕವಾದ ಸಂಗತಿ ಇನ್ನೇನಿದೆ?'' ಆಗ ಆ ತಾಯಿ ಆನಂದಗೊಂಡು ಹೇಳಿದಳು, ''ಅಮ್ಮಾ, ಸರಿಯಾಗಿ ಹೇಳಿದಿರಿ. ಮಗನು ಪರಮ ಮಂಗಳಕರವಾದ ಮಾರ್ಗದಲ್ಲಿ ನಡೆದ ಎಂದಾದರೆ, ತಾಯಿಗೆ ಅದಕ್ಕಿಂತ ಆನಂದ ನೀಡುವ ಸಂಗತಿ ಇನ್ನೇನಿರಲು ಸಾಧ್ಯ?'' ಬೇರೆ ಬೇರೆ ಸಂದರ್ಭಗಳಲ್ಲಿ ಶ್ರೀಮಾತೆಯವರು ಆಡಿದ ವಿಭಿನ್ನ ಬಗೆಯ ಮಾತುಗಳಿವು. ಎರಡೂ ಕಡೆ ಅವರ ಅಂತರಂಗದ ಭಾವನೆ ವ್ಯಕ್ತವಾಗುತ್ತದೆ: ಒಂದರಲ್ಲಿ ಶ್ರೀಮಾತೆಯವರು ಮಗನನ್ನು ಕಳೆದುಕೊಂಡ ತಾಯಿಯ ದುಃಖದಲ್ಲಿ ಸಮಭಾಗಿಯಾಗಿದ್ದಾರೆ; ಇನ್ನೊಂದೆಡೆ ತಾಯಿ ತನ್ನ ಮಗನ ಮಂಗಳವುಂಟಾಗುವುದನ್ನು ಅರಿತಿದ್ದಾಳೆ- ಅದನ್ನು ನೋಡಿ ಶ್ರೀಮಾತೆ ಪರಮಾನಂದಗೊಂಡಿದ್ದಾರೆ.

ಅಪಾರ ಪ್ರೇಮಮಯಿ ಜನನಿ ಶ್ರೀಮಾತೆಯವರು ಹೇಗೆ ತಂದೆಯನ್ನು ಕಳೆದುಕೊಂಡು ದುಃಖಿತಪ್ತಳಾಗಿದ್ದ 'ರಾಧು'ವನ್ನು ಪ್ರೀತಿಸತೊಡಗಿ, ಅವಳ ಎಲ್ಲ ಕಾಟಗಳನ್ನೂ ಮುಖಸಿಂಡರಿಸದೆ ಸಹಿಸಿದರೋ, ಅದೇ ರೀತಿ ಅವರು ತಮ್ಮ ಎಲ್ಲ ಶಿಷ್ಯಂದಿರ, ಮಕ್ಕಳ ಕಾಟವನ್ನೆಲ್ಲ ನಗುನಗುತ್ತಾ ಸಹಿಸುತ್ತಿದ್ದರು. ಜಯರಾಮಬಾಟಿಯಲ್ಲಿ ಅವರಿಗೆ ಮಲೇರಿಯಾ ಜ್ವರ ಬಂದು, ಅವರು ಅತ್ಯಂತ ಕ್ಷೀಣಿಸಿದ್ದರು. ಆಗ ಸುಮಾರು ಮಧ್ಯಾಹ್ನದ ಹೊತ್ತಿಗೆ ಇರಬೇಕು, ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಅಷ್ಟರಲ್ಲಿ ಬಹಳ ದೂರದಿಂದ ಭಕ್ತನೊಬ್ಬನು ನಡೆದುಕೊಂಡು ಬಂದಿದ್ದ; ಅತ್ಯಂತ ಆಯಾಸಗೊಂಡ ಅವನು ಅಲ್ಲಿಗೆ ಬಂದು ತಲುಪಿದ. ಶ್ರೀಮಾತೆಯವರು ಕೂಡಲೇ ಅವನ ಸತ್ಕಾರ ಮಾಡುವುದಕ್ಕಾಗಿ ತಮ್ಮ ವಿಶ್ರಾಂತಿಯನ್ನು ತ್ಯಾಗ ಮಾಡಿದರು. ಅವರಿಗೆ ನೂರಾರು ಜನರಿಂದ ಅವರ ಬಳಿ ನೂರಾರು ಬೇಡಿಕೆಗಳು! ಕೆಲವರು ಶ್ರೀಮಾತೆಯವರ ಕೈಯಿಂದ ಅನ್ನವನ್ನು ಸ್ವೀಕರಿಸದೆ ನೀರನ್ನೂ ಕುಡಿಯಲಾರರು. ಅವರು ಈ ರೀತಿ ಸಂಕಲ್ಪ ಮಾಡಿಬಿಟ್ಟಿದ್ದಾರೆ.

ಶ್ರೀಮಾತೆ ಕೂಡಲೇ ಅಡುಗೆಮನೆಗೆ ಹೋಗಿ ಬಿಡುವರು. ಯಾರೋ ಒಬ್ಬರು ಶ್ರೀಮಾತೆಯವರ ಪಾದಪೂಜೆ ಮಾಡಿದ ನಂತರವೇ ಪ್ರಸಾದದ ಊಟ ಮಾಡುವುದಾಗಿ ಬೇಡಿಕೊಳ್ಳುತ್ತಿದ್ದಾರೆ. ಪ್ರೇಮಮಯಿ ಶ್ರೀಮಾತೆ ಅವರ ಪ್ರಾರ್ಥನೆಯನ್ನೂ ಪೂರೈಸುವರು. ನೂರು ಬಗೆಯ ಹಠಮಾರಿ ಶಿಷ್ಯಂದಿರಿಂದ ಶ್ರೀಮಾತೆಯವರ ಬಳಿ ಅನೇಕ ಬಗೆಯ ಪ್ರಾರ್ಥನೆಗಳು! ಸಹಿಷ್ಣುತೆಯೇ ಮೂರ್ತಿವೆತ್ತಂತಿದ್ದ ಕರುಣಾಮಯಿ ಜನನಿ ಶ್ರೀಮಾತೆ. ಅವರು ತಮ್ಮ ಎಲ್ಲ ಬಗೆಯ ಪ್ರೇಮಾಮೃತವನ್ನು ಎರೆದು ಅವರನ್ನು ಶಾಂತಗೊಳಿಸುತ್ತಿದ್ದರು. ಶ್ರೀಮಾತೆಯವರ ಈ ಚಿತ್ರವನ್ನು ಪ್ರತಿಯೊಬ್ಬರೂ ಕಣ್ಣಾರೆ ಕಂಡಿದ್ದರು; ಆದರೆ ಅದಕ್ಕೆ ಸರಿಸಾಟಿಯಾಗಿ ಅವರಲ್ಲಿ ದೃಢತೆಯೂ ಚೆನ್ನಾಗಿ ಇರುತ್ತಿತ್ತು. ಶ್ರೀಮಾತೆಯವರಿಗೆ ಕಾಯಿಲೆಯಾಗಿದ್ದಾಗ ಒಂದು ದಿನ ಒಬ್ಬಾಕೆ ಕಾವಿಬಟ್ಟೆ ತೊಟ್ಟಿದ್ದ ಮಹಿಳೆ ಅವರ ದರ್ಶನಕ್ಕಾಗಿ ಬಂದಿದ್ದಳು. ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆಯುವ ಬಯಕೆ ಅವಳಿಗಿತ್ತು. ಆಗ ಶ್ರೀಮಾತೆ ಮಂಚದ ಮೇಲೆ ಮಲಗಿದ್ದರು. ಆಕೆ ಶ್ರೀಮಾತೆಯವರ ಪಾದಧೂಳಿಯನ್ನು ತೆಗೆದುಕೊಳ್ಳಲು ಮಂದೆ ನುಗ್ಗಿ ಬಂದುದನ್ನು ಕಂಡು ಶ್ರೀಮಾತೆ ಗಲಿಬಿಲಿಗೊಂಡು, ''ಏನು ಮಾಡುತ್ತಿದ್ದೀಯಾ? ಪಾದಗಳನ್ನು ಮುಟ್ಟಬೇಡ. ನೀನು ಕಾವಿಬಟ್ಟೆ ಧರಿಸಿರುವ ಸಂನ್ಯಾಸಿನಿ. ನನ್ನ ಪಾದಗಳನ್ನು ಸ್ಪರ್ಶಿಸಿ ನನ್ನನ್ನು ಅಪರಾಧಿಯನ್ನಾಗಿ ಮಾಡುತ್ತಿರುವೆ ಏಕೆ?'' ಎಂದರು. ಆ ಸಂನ್ಯಾಸಿನಿ ಅತ್ಯಂತ ದುಃಖಗೊಂಡು ಹೇಳಿದಳು, ''ನಾನು ತುಂಬಾ ಆಸೆಯಿಟ್ಟುಕೊಂಡು ತಮ್ಮ ಬಳಿಗೆ ಬಂದೆ, ನೀವು ನನಗೆ ದೀಕ್ಷೆ ನೀಡುವಿರಿ ಎಂದು.''

ಶ್ರೀಮಾತೆ: ''ಅವಸರ ಮಾಡಿದರೆ ಆದೀತೇನಮ್ಮಾ? ಸಮಯ ಬಂದಾಗ ಎಲ್ಲವೂ ತಾನಾಗಿಯೇ ಆಗುವುದು. ನಿನಗೆ ದೀಕ್ಷೆಯಾಗಿಲ್ಲವೆ? ಕಾವಿಬಟ್ಟೆ ಯಾರು ಕೊಟ್ಟರು? ಯಾರಿಂದ ಸಾಧನೆಯ ಉಪದೇಶ ಪಡೆದಿದ್ದೀಯೋ, ಅದನ್ನೇ ನಿಷ್ಠೆಯಿಂದ ಹಿಡಿದಿಟ್ಟುಕೋ. ಎಲ್ಲವೂ ತಕ್ಕ ಸಮಯದಲ್ಲಿ ಬಂದೊದಗುವುದು.''

ಕೊನೆಗೆ ಆ ಸಂನ್ಯಾಸಿನಿ ಹೇಳಿದಳು: ''ನನಗೆ ಯಾರೂ ಕಾವಿಬಟ್ಟೆ ನೀಡಿಲ್ಲ. ನಾನೇ ಧರಿಸಿಕೊಂಡಿದ್ದೇನೆ. ಇನ್ನು ನಾನು ಪಡೆದ ಸಾಧನೆಯ ವಿಧಾನದಿಂದ ನನ್ನ ಮನಸ್ಸಿಗೆ ಶಾಂತಿ ಲಭಿಸುತ್ತಿಲ್ಲ.''

ಆಗ ಶ್ರೀಮಾತೆ ಹೇಳಿದರು: ''ಇವತ್ತು ನನಗೆ ತುಂಬಾ ಕಾಯಿಲೆ. ನಿನ್ನೊಂದಿಗೆ ಮಾತುಕತೆ ನಡೆಸಲಾಗುತ್ತಿಲ್ಲ ಅಂತ ದುಃಖಿಸಬೇಡ. ಆದರೆ ಇದನ್ನು ನೆನಪಿಟ್ಟುಕೋ, ಕಾವಿಬಟ್ಟೆ ಧರಿಸುವುದು ಅಷ್ಟೇನೂ ಸುಲಭದ ಮಾತಲ್ಲ. ಆಶ್ರಮದಲ್ಲಿರುವ ಈ ಮಕ್ಕಳೆಲ್ಲ ಠಾಕೂರರಿಗೋಸ್ಕರ ಎಲ್ಲವನ್ನೂ ತ್ಯಾಗ ಮಾಡಿ ಬಂದಿದ್ದಾರೆ. ಅವರೇ ಕಾವಿಬಟ್ಟೆ ಧರಿಸಲು ಅಧಿಕಾರಿಗಳು. ಕಾವಿಬಟ್ಟೆ ಧರಿಸುವುದು ಯಾರೆಂದರೆ ಅವರಿಗೆ ಸಾಧ್ಯವಾದ ಕೆಲಸವೆ?'' ಹೀಗೆ ಶ್ರೀಮಾತೆ ಮಧುರವಾದ ಮಾತುಗಳನ್ನಾಡಿ ಅವಳನ್ನು ಕಳುಹಿಸಿಕೊಟ್ಟರು.

ಆದರೆ ಶ್ರೀಮಾತೆಯವರು ಅವಳಿಗೆ ತಮ್ಮ ಪಾದಧೂಳಿಯನ್ನು ತೆಗೆದುಕೊಳ್ಳಲು ಬಿಡಲಿಲ್ಲ.

ಶ್ರೀಮಾತೆಯವರಿಗೆ ಕಾಲುಗಳಲ್ಲಿ ವಾತವಿದ್ದುದರಿಂದ, ಅವರು ಕಾಲುಚಾಚಿ ಕುಳಿತುಕೊಳ್ಳುತ್ತಿದ್ದರು. ಆಗ ಯಾರೋ ಭಾಗ್ಯವಂತಳಾದ ಹೆಣ್ಣುಮಗಳಿಗೆ ತಾವಾಗಿಯೇ ಹೇಳುತ್ತಿದ್ದರು: ''ನನ್ನ ಕಾಲುಗಳನ್ನು ಒಂದಿಷ್ಟು ಒತ್ತಮ್ಮಾ ತುಂಬಾ ನೋಯುತ್ತಿದೆ.''∩

'ಉದ್ಬೋಧನ'ದ ಸಮೀಪದಲ್ಲಿ ಬೇಳೆ ಉಗ್ರಾಣದಲ್ಲಿ ಒಂದು ಹಿಂದೀ ಕುಟುಂಬ ವಾಸವಾಗಿತ್ತು. ಶ್ರೀಮಾತೆಯವರು ತಮ್ಮ ಕೋಣೆಯ ಹಿಂದೆ ಇದ್ದ ವರಾಂಡದಲ್ಲಿ ಕುಳಿತು ಬಿಸಿಲಲ್ಲಿ ಚಳಿಕಾಯಿಸುತ್ತಿದ್ದರು. ಚಿಕ್ಕ ಮಕ್ಕಳೆಲ್ಲ ಆಟವಾಡುತ್ತಿದ್ದರು; ಅದನ್ನು ನೋಡಿ ಅವರು ಆನಂದಿಸುತ್ತಿದ್ದರು.

ಒಂದು ದಿನ ಒಬ್ಬನು ಹಿಂದೀಯವನು ಆ ಹೆಂಗುಸನ್ನು ಬೆತ್ತದಿಂದ ಹೊಡೆಯುತ್ತಿದ್ದ; ಆಕೆ ದೊಡ್ಡ ಧ್ವನಿ ಮಾಡಿ ಕಿರುಚತೊಡಗಿದಳು. ಶ್ರೀಮಾತೆಯವರು ಈ ಗದ್ದಲವನ್ನು ಕಂಡು, ವರಾಂಡದ ಬದಿಯ ಸರಳನ್ನು ಹಿಡಿದು ಎದ್ದು ನಿಂತರು. ಅವರು ತಲೆಯಮೇಲೆ ಹೊದ್ದುಕೊಂಡಿದ್ದ ಸೆರಗು ಬಿದ್ದು ಹೋಯಿತು. ಸ್ವಭಾವತಃ ಮೆತ್ತಗೆ ಮಾತನಾಡುವ ಸ್ವಭಾವದವರಾಗಿದ್ದ ಶ್ರೀಮಾತೆಯವರು ಆ ವ್ಯಕ್ತಿಗೆ ದೊಡ್ಡ ಧ್ವನಿಯಿಂದ, ''ಬೆತ್ತವನ್ನು ಬಿಸಾಕಿಬಿಡು, ಗಂಡುಸೆ! ಅವಳ ಮೇಲೆ ಕೈಮಾಡಿದರೆ ಎಚ್ಚರಿಕೆ!'' ಎಂದರು. ಶ್ರೀಮಾತೆಯವರು ಅದೆಷ್ಟು ಜೋರಾಗಿ ಗದರಿಸಿದ್ದರೆಂದರೆ, ಅವನು ಹೆದರಿ, ಬೆತ್ತವನ್ನು ಬಿಸಾಡಿ, ಶ್ರೀಮಾತೆಗೆ ಕೈಜೋಡಿಸಿ ನಮಸ್ಕಾರ ಮಾಡಿ, ಎಲ್ಲಿಗೋ ಓಡಿಹೋದ. ಮತ್ತೆ ಅವನನ್ನು ಎಲ್ಲೂ ಕಾಣಸಿಗಲಿಲ್ಲ. ಅಲ್ಲಿಯವರೆಗೂ ಆಕೆಗೆ ಅವನು ಅನೇಕ ಬಾರಿ ಹೊಡೆದಿದ್ದಿರಬೇಕು; ಆದರೆ ಆ ದಿನದಿಂದ ಅವನು ಅವಳಿಗೆ ಎಂದೂ ಹೊಡೆಯಲಿಲ್ಲ.

''ಶ್ರೀಮಾತೆಯವರನ್ನು ನೋಡಿದಾಗ ನಿಮಗೆ ಏನನ್ನಿಸಿತ್ತು?'' – ಯಾರು ಶ್ರೀಮಾತೆಯವರನ್ನು ಪ್ರತ್ಯಕ್ಷ ಕಂಡಿರಲಿಲ್ಲವೋ ಅವರು ಈ ಪ್ರಶ್ನೆಯನ್ನು ಕೇಳಿದರೆ, ಅವರಿಗೆ ಖಂಡಿತ ಅದನ್ನು ತಿಳಿಯಲು ವ್ಯಾಕುಲತೆಯುಂಟಾಗುವುದು. ಆದರೆ ಯಾರು ಅವರನ್ನು ನೇರ ಕಂಡಿದ್ದಾರೋ ಅವರಿಗಾದರೂ ಶ್ರೀಮಾತೆಯವರನ್ನು ತಿಳಿಯಲಾಗಿದೆಯೇನು?

ಅವರು ಯಾರೊಂದಿಗೂ ಸಂಕೋಚಭಾವವನ್ನು ಹೊಂದಿರುತ್ತಿರಲಿಲ್ಲ; ಅವರ ಇಡೀ ಮನಸ್ಸನ್ನು ಅವರು ತಮ್ಮೆಡೆಗೆ ಸೆಳೆದುಕೊಂಡು ಬಿಡುತ್ತಿದ್ದರು– ಇದು ಮಾತ್ರ ನಮಗೆ ಅರಿವಾಗುತ್ತಿತ್ತು. ಮನಸ್ಸಿನ ಎಲ್ಲ ಜಟಿಲತೆ, ದ್ವಂದ್ವಗಳನ್ನು ಒಂದೇ ಮಾತಿನಲ್ಲಿ

∩ ಈ ಪ್ಯಾರಾ ಮತ್ತು ಮುಂದಿನ ಪ್ಯಾರಾ ಹಿಂದೇ ಹೇಳಿದ 'ದೇಶ್' ಪತ್ರಿಕೆಯಲ್ಲಿ ಪ್ರಕಟವಾದ ಲೇಖಕಿಯ 'ಜನನಿ ಸರಸ್ವತಿ' ಎಂಬ ಲೇಖನದಿಂದ ಸಂಗ್ರಹಿಸಲಾಗಿದೆ. *(–ಸಂ)*

ತಿಳಿಗೊಳಿಸಿಬಿಡುತ್ತಿದ್ದರು. ಶ್ರೀಮಾತೆಯವರ ಸಾನ್ನಿಧ್ಯಕ್ಕೆ ಹೋದ ಕೂಡಲೇ ಮನಸ್ಸಿಗೆ ತಂಪೆರೆದಂತಾಗುತ್ತಿತ್ತು. ಇದೇ ಶ್ರೀಮಾತೆಯವರ ನಿಜವಾದ ಸ್ವರೂಪ.

ಶ್ರೀಮಾತೆಯವರಿಗೆ ಕಾಯಿಲೆಯುಂಟಾಗಿದ್ದಾಗ ಒಂದು ಸಲ ಅವರ ಹುಟ್ಟುಹಬ್ಬದ ದಿನ ಬಂತು. ಅಂದು ಅವರ ಪಾದಪೂಜೆ ಮಾಡಲು ಅನೇಕ ಮಂದಿ ಭಕ್ತರು ಬಂದು ಸೇರಿದ್ದರು. ಆಗ ಶ್ರೀಮಾತೆಯವರು ತುಂಬ ದುರ್ಬಲರಾಗಿದ್ದರು. ಜ್ವರ ಬಿಟ್ಟು ಬಿಟ್ಟು ಬರುತ್ತಿತ್ತು. ಅವರು ಮಂಚದಲ್ಲಿ ಮುಖದ ತುಂಬಾ ಸೆರಗನ್ನು ಹೊದ್ದು ಕುಳಿತಿದ್ದರು. ನೂರಾರು ಮಂದಿ ಭಕ್ತರು ಬರುತ್ತಲೇ ಇದ್ದರು. ಶ್ರೀಮಾತೆಯವರು ಪ್ರೀತಿಯಿಂದ ಎಲ್ಲರ ಪೂಜೆಯನ್ನೂ ಸ್ವೀಕರಿಸುತ್ತಿದ್ದರು. ಎಷ್ಟೇ ತ್ವರೆ ಮಾಡಿದರೂ, ಭಕ್ತರ ಪೂಜೆ ತಡವಾಗುತ್ತಿತ್ತು. ಆದರೆ ಶ್ರೀಮಾತೆಯವರು ಸಮಭಾವದಿಂದ, ಪ್ರಸನ್ನಮಯಿಯಾಗಿ ತಮ್ಮ ಶಿಷ್ಯಂದಿರ, ಭಕ್ತರ ಅರ್ಚನೆಯನ್ನು ಸ್ವೀಕರಿಸುತ್ತಿದ್ದರು. ಈ ದೃಶ್ಯ ಇಂದಿಗೂ ನನ್ನ ಮನಸ್ಸಿನಲ್ಲಿ ಮುದ್ರೆಯೊತ್ತಿದಂತೆ ನಿಂತಿದೆ.

ಶ್ರೀರಾಮಕೃಷ್ಣರ ಜೊತೆಗೆ ಹೋಲಿಸಿ ನೋಡುವಾಗ, ಶ್ರೀಮಾತೆಯವರ ಸರಳ ಭಾವದಲ್ಲಿ ಅನೇಕ ಸಾದೃಶ್ಯವನ್ನು ನೋಡಬಹುದು. ಶ್ರೀರಾಮಕೃಷ್ಣರಿಗೆ ಗಂಟಲಲ್ಲಿ ಕ್ಯಾನ್ಸರ್ ಆದಾಗ, ಅದನ್ನು ಗುಣಪಡಿಸಲು ಅವರು ಯಾರುಯಾರನ್ನೋ ಹೇಗೆ ವಿಚಾರಿಸುತ್ತಿದ್ದರೋ, ಶ್ರೀಮಾತೆ ಕೂಡ ತಮಗೆ ಕಾಯಿಲೆಯಾಗಿದ್ದಾಗ ಅದೇ ರೀತಿ, ''ಎಂಥ ಅನಾರೋಗ್ಯವುಂಟಾಯಿತಮ್ಮಾ, ಇದೇನು ವಾಸಿಯಾಗಲಾರದೇನಮ್ಮಾ? ನಾನು ಹಾಸಿಗೆಯಲ್ಲೇ ಮಲಗಿಬಿಡುವಂತಾಯಿತಲ್ಲಾ! ಇನ್ನೇನು ಹೇಳಲಿ ನಾನು?'' ಎನ್ನುತ್ತಿದ್ದರು. ಇನ್ನೊಮ್ಮೆ ಶಶಧರ ತರ್ಕಚೂಡಾಮಣಿ ಮಾನಸಿಕ ಶಕ್ತಿಯನ್ನು ಪ್ರಯೋಗಿಸಿ ಅನಾರೋಗ್ಯವನ್ನು ವಾಸಿ ಮಾಡಿಕೊಳ್ಳಲು ಸೂಚಿಸಿದಾಗ, ಶ್ರೀರಾಮಕೃಷ್ಣರು ಹೇಳಿದ್ದರು: ''ನೀನು ಪಂಡಿತನಾಗಿದ್ದುಕೊಂಡು ಇದೆಂಥ ಮಾತನ್ನಾಡುತ್ತಿದ್ದೀಯಾ? ಯಾವ ಮನಸ್ಸನ್ನು ಸಚ್ಚಿದಾನಂದನಿಗೆ ನೀಡಿದ್ದೇನೋ ಅದನ್ನು ಮತ್ತೆ ಹಿಂದಿರುಗಿ ತಂದು ಮೂಳೆ-ಮಾಂಸದ ಗೂಡಿನ ಮೇಲಿಡಬೇಕೆ?'' ಅವರು ಅತ್ಯಂತ ದೃಢವಾಗಿ ಅದನ್ನು ಹೇಳಿದ್ದರು. ಶ್ರೀಮಾತೆ ಕೂಡ, ಯಾರಾದರೂ ಬಹಳ ಒತ್ತಾಯ ಮಾಡಿ, ''ಒಂದು ಸಲ ನೀವು ಕಾಯಿಲೆ ವಾಸಿಯಾಗಲಿ ಎಂದು ಹೇಳಿಬಿಡಿ; ಆಗ ನಿಜವಾಗಿಯೂ ವಾಸಿಯಾಗುವುದು'' ಎಂದರೆ, ಆಗ ಹೇಳುತ್ತಿದ್ದರು- ''ಹಾಗೆ ಹೇಳಬಹುದೇನಮ್ಮಾ? ಠಾಕೂರರು ಏನು ಮಾಡುವರೋ ಹಾಗೇ ಆಗುತ್ತದೆ. ನಾನು ಇನ್ನೇನು ಹೇಳಲಿ?'' ಇಲ್ಲಿ ಬೇರೆ ಬಗೆಯ ಉತ್ತರ ಅವರಿಂದ ಸಿಗಲಾರದು. ಯಾರಾದರೂ ಹಠ ಮಾಡುತ್ತ, ''ನೀವು ಒಂದು ಬಾರಿ ನಿಮ್ಮ ಬಾಯಿಯಿಂದ ಹಾಗೆ ಹೇಳಿ; ಹಾಗಿದ್ದರೆ ಖಂಡಿತ ವಾಗಿಯೂ ಕಾಯಿಲೆ ಹೊರಟೇಹೋಗುವುದು'' ಎಂದರೆ, ''ನಾನು ಹಾಗೆ ಹೇಳಬಹುದೆ? ಠಾಕೂರರು ಏನು ನಿರ್ಧರಿಸುವರೋ ಹಾಗೇ ಆಗುವುದು'' ಎನ್ನುತ್ತಿದ್ದರು. ಅವರದು ಒಂದೇ ಉತ್ತರ.

ಶ್ರೀಮಾತೆಯವರಿಗೆ ಅನಾರೋಗ್ಯವುಂಟಾಗಿದ್ದಾಗ 'ಉದ್ಬೋಧನ' ಕಾರ್ಯಾಲಯದಲ್ಲಿ ಅವರ ಜನ್ಮದಿನದಂದು ಇದ್ದ ಶ್ರೀಮಾತೆಯವರ ಆ ಚಿತ್ರ ನೆನಪಾಗುತ್ತಿದೆ. ಮುಖದ ಮೇಲೆ ಸೆರಗನ್ನೆಳೆದುಕೊಂಡಿದ್ದ ಅವರು ನಿಂತುಕೊಂಡಿದ್ದಾರೆ; ಪ್ರತಿಮೆಯ ಹಾಗೆ. ಭಕ್ತರು ಒಬ್ಬೊಬ್ಬರಾಗಿ ಬಂದು ಅವರ ಪಾದಗಳಿಗೆ ಪುಷ್ಪಾಂಜಲಿ ನೀಡುತ್ತಿದ್ದಾರೆ. ಸ್ವಾಮಿ ಶಾರದಾನಂದರು ಕೈಯಲ್ಲಿ ಗಡಿಯಾರ ಕಟ್ಟಿಕೊಂಡು, ಬಾಗಿಲ ಬಳಿ ನಿಂತಿದ್ದಾರೆ. ಪದೇಪದೇ ಅವರು ಹೇಳುತ್ತಿದ್ದಾರೆ, ''ಐದು ನಿಮಿಷಕ್ಕಿಂತ ಹೆಚ್ಚು ಸಮಯವನ್ನು ಯಾರೂ ತೆಗೆದುಕೊಳ್ಳಬೇಡಿ. ಗಲ್ಲಿಯಲ್ಲಿ ತುಂಬಾ ಜನ ನಿಂತಿದ್ದಾರೆ. ಎಲ್ಲರಿಗೂ ಸಮಯಾವಕಾಶ ನೀಡಬೇಕು.''[೨]

ಸ್ವಾಮಿ ಶಾರದಾನಂದರು ಪ್ರತಿದಿನ ತಮ್ಮ ಸ್ನಾನದ ನಂತರ ಶ್ರೀಮಾತೆಯವರಿಗೆ ಒಂದು ಬಾರಿ ಪ್ರಣಾಮ ಮಾಡಲು ಅವರ ಬಳಿಗೆ ಹೋಗುತ್ತಿದ್ದರು. ಶ್ರೀಮಾತೆಯವರು ಮುಖದ ಮೇಲೆ ಸೆರಗನ್ನು ಹೊದ್ದುಕೊಂಡಿರುತ್ತಿದ್ದರು. ಕಾಯಿಲೆಯಾಗಿದ್ದಾಗ ಶ್ರೀಮಾತೆಯವರಿಗೆ ಅವರೇ ಸೇವೆ ಮಾಡುತ್ತಿದ್ದರು. ಶ್ರೀಮಾತೆ ಅವರನ್ನು 'ಶರತ್' 'ಶರತ್' ಎಂದು ಬಳಿಗೆ ಕರೆಯುತ್ತಿದ್ದರು. ಚಿಕ್ಕ ಹುಡುಗಿಯ ಹಾಗೆ, ಇನ್ನು ಕಹಿ ಔಷಧಿ ಕುಡಿಯಲಾರೆ, ಮಗೂ ಎಂದು ಹಠಮಾಡುತ್ತಿದ್ದರು. ''ಮಗೂ, ನಿನ್ನ ತಣ್ಣಗಿನ ಕೈಯನ್ನೊಮ್ಮೆ ನನ್ನ ಬೆನ್ನ ಮೇಲೆ ಆಡಿಸು'' ಎನ್ನುತ್ತಿದ್ದರು. ಇದರಿಂದ ತಿಳಿದುಬರುತ್ತದೆ, ತಾಯಿ ಹಾಗೂ ಮಗನ ನಡುವೆ ಇದ್ದ ಅವಗುಂಠನದ (ಸೆರಗಿನ) ಅಂತರ ಕೇವಲ ಶ್ರೀಮಾತೆಯವರ ಲಜ್ಜಾಶೀಲ ಸ್ವಭಾವದ ಪ್ರಕಾಶನವಷ್ಟೇ ಹೊರತು, ವಾಸ್ತವಿಕವಾಗಿ ಅವರ ಅಂತರ್ಯದಲ್ಲಿ ಯಾವುದೇ ಅಂತರವಿರಲಿಲ್ಲ ಎಂಬುದಾಗಿ.

ಸೋದರಿ ನಿವೇದಿತಾ ಹಾಗೂ ಸೋದರಿ ಕ್ರಿಸ್ಟೀನ್ ಇಬ್ಬರೂ ಬಾಗ್‌ಬಜಾರಿನಲ್ಲಿದ್ದ 'ಉದ್ಬೋಧನ' ಕಾರ್ಯಾಲಯಕ್ಕೆ ದಿನದಲ್ಲಿ ಒಂದು ಬಾರಿ ಬಂದು, ಶ್ರೀಮಾತೆಯವರ ಬಳಿ ಸ್ವಲ್ಪ ಹೊತ್ತು ಇದ್ದು ಹೋಗುತ್ತಿದ್ದರು. ಚಿಕ್ಕ ಹುಡುಗಿ ತನ್ನ ತಾಯಿಯ ಮುಖವನ್ನೇ ಆನಂದದಿಂದ ಹೇಗೆ ನೋಡುತ್ತಿರುವಳೋ, ಹಾಗೆಯೇ ನಿವೇದಿತಾ ಹಾಗೂ ಕ್ರಿಸ್ಟೀನ್ ತಮ್ಮ 'ಮಾತಾದೇವಿ'ಯ (ನಿವೇದಿತಾ ಹಾಗೂ ಕ್ರಿಸ್ಟೀನ್ ಶ್ರೀಮಾತೆಯವರನ್ನು 'ಮಾತಾದೇವಿ' ಎಂದೇ ಕರೆಯುತ್ತಿದ್ದರು) ಮುಖವನ್ನು ಆ ರೀತಿ ನೋಡುತ್ತಿದ್ದರು. ಸೋದರಿ ನಿವೇದಿತಾಳಂತೆ ತೇಜಸ್ವಿನಿಯಾದ ಹೆಂಗಸು ನಾರೀಕುಲದಲ್ಲೇ ಅತ್ಯಂತ ದುರ್ಲಭ; ಅವಳ ಬುದ್ಧಿಯ ಬೆಳಗಿನಿಂದ ಪ್ರಜ್ವಲಿಸುತ್ತಿದ್ದ ಆ ಕಣ್ಣುಗಳ ದೃಷ್ಟಿಯನ್ನು ಕಂಡರೇನೇ, ಅವುಗಳು ಜಗತ್ತಿನ ರಹಸ್ಯವನ್ನೆಲ್ಲ ಪ್ರಕಟಪಡಿಸಲು ಸಮರ್ಥ

---

೨ ಈ ಪ್ಯಾರಾ ಹಾಗೂ ಮುಂದಿನ ಪ್ಯಾರಾಗಳನ್ನು ಹಿಂದೆ ಹೇಳಿದ 'ದೇಶ್' ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಿಂದ ಸಂಗ್ರಹಿಸಲಾಗಿದೆ. *(-ಸಂ)*

ವೆಂಬಂತೆ ಭಾಸವಾಗುತ್ತಿತ್ತು; ಮಾತಾದೇವಿಯ ಬಳಿ ಅವಳು ಕುಳಿತಿದ್ದಾಗ ಅವಳನ್ನು ಕಂಡರೆ, ಐದುವರ್ಷದ ಮಗುವಿನ ಸ್ವಭಾವದವಳಾಗಿ ಕಾಣಿಸುತ್ತಿದ್ದಳು; ತಾಯಿಯನ್ನೇ ಸಂಪೂರ್ಣವಾಗಿ ಆಶ್ರಯಿಸಿದ ಚಿಕ್ಕ ಹುಡುಗಿಯಂತೆ ಅನ್ನಿಸುತ್ತಿತ್ತು. ಮಾತಾದೇವಿ ಅವಳತ್ತ ಪ್ರೀತಿಯಿಂದ ನಗುತ್ತ ನೋಡುತ್ತಿದ್ದರೆ, ಅವರ ಆದರದಿಂದ ನಿವೇದಿತಾ ಚಿಕ್ಕ ಹುಡುಗಿಯಂತೆ ಒಂದೇ ಕ್ಷಣದಲ್ಲಿ ಕರಗಿ ಹೋಗಿಬಿಡುತ್ತಿದ್ದಳು. ಶ್ರೀಮಾತೆಯವರು ಕುಳಿತುಕೊಳ್ಳುತ್ತಿದ್ದ ಆಸನವನ್ನು ಅವರಿಗೋಸ್ಕರ ಹರಡುವುದಕ್ಕೆ ಎಂದು ನಿವೇದಿತಾಳಿಗೆ ಅವಕಾಶ ದೊರಕಿತೋ, ಅಂದು ಅವಳಿಗಾದ ಆನಂದವನ್ನು ಮಾತಿನ ಮೂಲಕ ಹೇಳಲಾಗದು, ಅದನ್ನು ಆಗ ಅವಳ ಮುಖವನ್ನು ಕಂಡಾಗ ಮಾತ್ರ ತಿಳಿಯಬಹುದಾಗಿತ್ತು. ಆಸನವನ್ನು ಹರಡುವ ಮುನ್ನ ಅವಳು ಅನೇಕ ಬಾರಿ ಅದನ್ನು ಚುಂಬಿಸುತ್ತಿದ್ದಳು, ಬಳಿಕ ಅದನ್ನು ಅನೇಕ ಬಾರಿ ಧೂಳನ್ನು ಕೊಡವಿ, ಬಳಿಕ ಹರಡುತ್ತಿದ್ದಳು. ಅವಳ ಭಾವಪೂರ್ಣವಾದ ಈ ಸೇವೆಯನ್ನು ಕಂಡಾಗ ಅರ್ಥವಾಗುತ್ತಿತ್ತು, ಮಾತಾದೇವಿಯವರಿಗೆ ಈ ರೀತಿ ಸೇವೆ ಮಾಡುವ ಅವಕಾಶ ಸಿಕ್ಕಿದ್ದರಿಂದ ಅವಳ ಜೀವನ ಸಾರ್ಥಕ್ಯವನ್ನು ಹೊಂದಿತು, ಎಂದು.[೩]

ಮಾತಾದೇವಿ ಒಂದು ದಿನ ವಿದ್ಯಾಲಯವನ್ನು ನೋಡಲು ಬರುವರೆಂಬುದು ನಿಶ್ಚಯವಾಯಿತು. ಈ ವಿಷಯವನ್ನು ತಿಳಿದ ಕ್ಷಣದಿಂದ ನಿವೇದಿತಾಳ ಕೆಲಸ ಹಾಗೂ ಆನಂದಕ್ಕೆ ಯಾವುದೇ ಪಾರವಿರಲಿಲ್ಲ. ವಿದ್ಯಾಲಯದ ಎಲ್ಲ ಕೋಣೆಗಳನ್ನೂ ಗುಡಿಸಿ, ಸಾರಿಸಿ, ಸ್ವಚ್ಛಗೊಳಿಸಿ ಸಿದ್ಧಪಡಿಸಿದರು. ಎಲೆ-ಹೂಗಳನ್ನೆಲ್ಲ ತಂದು ಬಾಗಿಲಲ್ಲಿ ಅಲಂಕರಿಸಿ, ವಿದ್ಯಾಲಯವನ್ನು ಸಿಂಗರಿಸಿದರು. ಮಾತಾದೇವಿ ಎಲ್ಲಿ ಕುಳಿತು ಹುಡುಗಿಯರೊಂದಿಗೆ ಮಾತನಾಡಬೇಕು, ಹುಡುಗಿಯರು ಶ್ರೀಮಾತೆಯವರಿಗೆ ಏನೇನು ಉಡುಗೊರೆ ಕೊಡಬೇಕು, ಏನೇನನ್ನು ಓದಿ ಹೇಳಬೇಕು, ಯಾವ ರೀತಿಯಲ್ಲಿ ಅವರಿಂದ ಸ್ಫೂರ್ತಿ ಹೊಂದುವಂತಾಗಬೇಕು - ಹೀಗೆ ಎಲ್ಲ ವಿಷಯಗಳನ್ನೂ ನಿಶ್ಚಯಿಸಿಕೊಳ್ಳಲು ನಿವೇದಿತಾ ಸ್ವಲ್ಪವೂ ತಡಮಾಡಲಿಲ್ಲ. ಬಳಿಕ ಶ್ರೀಮಾತೆಯವರು ವಿದ್ಯಾಲಯಕ್ಕೆ ಬಂದಾಗ ನಿವೇದಿತಾ ಆನಂದಾತಿರೇಕದಿಂದ ಬಾಹ್ಯಜ್ಞಾನವನ್ನೇ ಕಳೆದುಕೊಂಡಂತೆ ಮೈಮರೆತುಬಿಟ್ಟಳು. ಎಲ್ಲ ವ್ಯವಸ್ಥೆಯೂ ಸರಿಯಾಗಿದೆಯೇ, ಎಲ್ಲ ವಸ್ತುಗಳೂ ಆಯಾ ಜಾಗದಲ್ಲಿವೆಯೇ ಎಂದು ನೋಡುವುದಕ್ಕೆ ಆ ಕಡೆ ಈ ಕಡೆ ಅವಸರದಿಂದ ಆಕೆ ಓಡಾಡುತ್ತಿದ್ದಳು. ಚಿಕ್ಕ ಮಕ್ಕಳಂತೆ ಕಾರಣವಿಲ್ಲದೆ ಒಮ್ಮೊಮ್ಮೆ ನಗುತ್ತಿದ್ದಳು. ಒಮ್ಮೊಮ್ಮೆ ಆನಂದದಿಂದ ವಿದ್ಯಾಲಯದ ಶಿಕ್ಷಕರು, ವಿದ್ಯಾರ್ಥಿಗಳು ಅಥವಾ ಯಾರೋ ಸೇವಕಿಯರೊಂದಿಗೆ ಮಾತನಾಡಿ ಆದರಿಸುತ್ತಿದ್ದಳು.

ಶ್ರೀಮಾತೆಯವರ ಸ್ವರೂಪವನ್ನು ಲೇಖನಿಯ ಮೂಲಕ ಭಾಷೆಯ ರೂಪಕ್ಕಿಳಿಸುವ ಸಾಮರ್ಥ್ಯ ನನಗಿಲ್ಲ. ನಾನಿನ್ನೂ ಶ್ರೀಮಾತೆಯವರ ಭೇಟಿಯಾಗಿರಲಿಲ್ಲ; ಆಗ ನನ್ನ ಮಗಳು[೪] ನಿವೇದಿತಾಳ ಶಾಲೆಯಲ್ಲಿ ಕಲಿಯುತ್ತಿದ್ದಳು. ಅವಳ ಮೂಲಕವೇ ನನಗೆ ಶ್ರೀಮಾತೆಯವರ ಬಗ್ಗೆ ನೇರವಾಗಿ ತಿಳಿಯಿತು. ಅದಕ್ಕೆ ಮೊದಲು ಶ್ರೀಮಾತೆಯವರ ಬಗ್ಗೆ ಮನಸ್ಸಿನಲ್ಲಿ ಏನೇನೋ ಊಹಿಸಿಕೊಂಡಿದ್ದೆ. ನನ್ನ ಮಗಳು ಮೊದಲು ನನ್ನ ಹತ್ತಿರಕ್ಕೆ ಬಂದು ಶ್ರೀಮಾತೆಯವರ ವಿಷಯವಾಗಿ ಹೇಳಿದಳು: ''ಅಮ್ಮಾ, ನಾವು ಶ್ರೀಮಾತೆಯವರ ದರ್ಶನ ಮಾಡಲು ಹೋಗಿದ್ದೆವು. ಅವರು ಎಷ್ಟು ಸುಂದರವಾಗಿದ್ದಾರೆ, ಎಷ್ಟು ಒಳ್ಳೆಯವರು- ನೀವು ನೋಡಿದರೇನೇ ಅರ್ಥವಾದೀತು. ನಮಗೆ ಎಷ್ಟೊಂದು ಆನಂದವಾಯಿತು, ಅದನ್ನು ಹೇಗೆ ಹೇಳಲಿ! ಒಂದು ಸಲ ನೀವು ಅವರನ್ನು ನೋಡಲೇಬೇಕು ಅಂತ ನನಗೆ ಅನ್ನಿಸಿತು!'' ಅವಳಿಂದ ಶ್ರೀಮಾತೆಯವರ ಬಗ್ಗೆ ಕೇಳಿದ ನಂತರ, ಅವರ ಮಧುರವಾದ ಘಟನೆಗಳನ್ನು ಮತ್ತಷ್ಟು ಕೆದಕಿ ಕೇಳಿದೆ. ಅವಳೂ ಆನಂದದಿಂದ ಹೇಳಿದಳು: ಅವರು ಹೇಗೆ ಊಟಕ್ಕೆ ಕುಳಿತು ಹೆಣ್ಣುಮಕ್ಕಳೊಂದಿಗೆ ನಗುತ್ತಾ ಮಾತನಾಡುತ್ತಿದ್ದರು; ಕಡಿಮೆ ಊಟಮಾಡುತ್ತಿದ್ದುದಕ್ಕಾಗಿ ಗೋಲಾಪ್ ಮಾ ಅವರಿಂದ ಬೈಗುಳ ಕೇಳುತ್ತ, ಅವರೆಡೆಗೆ ನೋಡಿ ನಗುತ್ತಿದ್ದರು; ಎಲ್ಲರಿಗೂ ಪ್ರಸಾದವನ್ನು ಪ್ರೀತಿಯಿಂದ ಹಂಚಿಕೊಡುತ್ತಿದ್ದರು - ಇತ್ಯಾದಿ. ಅವಳು ವರ್ಣಿಸಿದ ರೀತಿಯಲ್ಲಿ ಆ ಚಿತ್ರ ನನ್ನ ಮನಸ್ಸಿನಲ್ಲಿ ಮುದ್ರಿತವಾಗಿಬಿಟ್ಟಿತ್ತು. ಅಂದಿನಿಂದ ಪ್ರತಿದಿನವೂ ಅವಳ ಮೂಲಕ ಶ್ರೀಮಾತೆಯವರ ಮಾತುಗಳನ್ನು ಕೇಳುತ್ತಿದ್ದೆ- ಹಾಗೂ ನನ್ನ ಮನಸ್ಸಿನಲ್ಲಿ ಒಂದು ಬಗೆಯ ಕೋಪವುಂಟಾಯಿತು, ಎಲ್ಲರನ್ನೂ ತಮ್ಮವರನ್ನಾಗಿಸಿಕೊಂಡಿರಿ, ನನ್ನನ್ನು ಮಾತ್ರ ಯಾಕೆ ಇಷ್ಟು ದೂರ ಇಟ್ಟುಬಿಟ್ಟಿರಿ - ಎಂದು. ಕೊನೆಗೆ ಒಂದು ದಿನ ಈ ತಡೆಗೋಡೆ ಒಡೆದು ಹೋಯಿತು. ನಾನು ಶ್ರೀಮಾತೆಯವರ ದರ್ಶನ ಪಡೆದೆ.

ಇಂದು ಅವರು ದುರ್ಲಭರಾಗಿದ್ದಾರೆ; ಧ್ಯಾನದಿಂದ ಮಾತ್ರ ಲಭಿಸಬಲ್ಲವರಾಗಿದ್ದಾರೆ. ೧೯೨೦ರ ಶ್ರಾವಣ ಮಾಸದಲ್ಲಿ, ೪ನೇ ದಿನದಂದು (ಜುಲೈ ೨೧) ರಾತ್ರಿ ೧:೩೦ರ ಹೊತ್ತಿಗೆ ಚಿನ್ಮಯ ಮೂರ್ತಿಯಾದ ಜನನಿ ಶ್ರೀಮಾತೆಯವರು ತಮ್ಮ ಮೃಣ್ಮಯ ಮಡಕೆಯನ್ನು (ಪಾರ್ಥಿವ ದೇಹವನ್ನು) ಒಡೆದುಬಿಟ್ಟರು. ಇಂದು ಭೌತಿಕ ದೃಷ್ಟಿಯು ಅವರ ದರ್ಶನವನ್ನು ಪಡೆಯುವ ಸಾಧ್ಯತೆಯನ್ನು ಕಳೆದುಕೊಂಡಿದೆ; ಅವರ ಪಾದಸ್ಪರ್ಶದಿಂದ ಜಗತ್ತು ಪವಿತ್ರವಾಗಿ, ಎಂಥ ಮಹಾಸಂಪತ್ತನ್ನು ಪಡೆದಿದೆ ಎಂಬುದನ್ನು ಅನುಭವಿಸಿ ತಿಳಿಯುವ ಸಮಯ ಬಂದಿದೆ. ✽

---

೩ ಈ ಪ್ಯಾರಾ ಹಾಗೂ ಮುಂದಿನ ಪ್ಯಾರಾಗಳನ್ನು ಲೇಖಕಿಯ 'ನಿವೇದಿತಾ' ಗ್ರಂಥದಿಂದ ಸಂಗ್ರಹಿಸಲಾಗಿದೆ. ಮುಂದೆ ಈ ಗ್ರಂಥ 'ನಾ ಕಂಡಂತೆ ನಿವೇದಿತಾ' ಎಂಬ ಹೆಸರಿನಲ್ಲಿ ಬಂಗಾಳಿಯಲ್ಲಿ ಪ್ರಕಟವಾಯಿತು. *(-ಸಂ)*

೪ ನಿರ್ಝರಿಣೀ ಸರ್ಕಾರ್ *(-ಸಂ)*